# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್\ಉಪಲೋಕ್\ಬಿಜಿಎಂ\3512\2019\ಎಆರ್‌ಇ–3

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 8/4/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** 1. ಡಾ.ಸತೀಶ್ ಬಸರಿಗಿಡದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಗದಗ ಜಿಲ್ಲೆ, ಗದಗ, 2. ಡಾ.ಚಂದ್ರು ಲಮಣಿ, ಆಡಳಿತ ವೈದ್ಯಾಧಿಕಾರಿ, ಜನರಲ್ ಆಸ್ಪತ್ರೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, 3. ಶ್ರೀ.ಮೋಹನ್ ಚಬ್ಬಿ, ಫಾರ್ಮಸಿಸ್ಟ್, ಜನರಲ್ ಆಸ್ಪತ್ರೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ ಮತ್ತು 4. ಶ್ರೀ.ಸುನೀಲ್, ಫಾರ್ಮಸಿಸ್ಟ್, ಜನರಲ್ ಆಸ್ಪತ್ರೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ ಇವರುಗಳು ಸರ್ಕಾರಿ ನೌಕರರುಗಳಾಗಿ ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*****

ಡಾ.ಸತೀಶ್ ಬಸರಿಗಿಡದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಗದಗ ಜಿಲ್ಲೆ, ಗದಗ, 2. ಡಾ.ಚಂದ್ರು ಲಮಣಿ, ಆಡಳಿತ ವೈದ್ಯಾಧಿಕಾರಿ, ಜನರಲ್ ಆಸ್ಪತ್ರೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, 3. ಶ್ರೀ.ಮೋಹನ್ ಚಬ್ಬಿ, ಫಾರ್ಮಸಿಸ್ಟ್, ಜನರಲ್ ಆಸ್ಪತ್ರೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ ಮತ್ತು 4. ಶ್ರೀ.ಸುನೀಲ್, ಫಾರ್ಮಸಿಸ್ಟ್, ಜನರಲ್ ಆಸ್ಪತ್ರೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ (ಇನ್ನು ಮುಂದೆ "ಕ್ರಮವಾಗಿ 1 ರಿಂದ 4ನೇ ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಗದಗ ತಾಲ್ಲೂಕು ಮತ್ತು ಜಿಲ್ಲೆಯ ಜನರಲ್ ಆಸ್ಪತ್ರೆಯಲ್ಲಿ ಔಷಧಗಳ ದುರುಪಯೋಗ ಮತ್ತು ದುರುಪಯೋಗದ ಬಗ್ಗೆ ಮೂಲ ಮಾಹಿತಿಯ ಆಧಾರದ ಮೇಲೆ ಸುಯೋ ಮೋಟೋ ದೂರು ದಾಖಲು ಮಾಡಿ, ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದಿನಾಂಕ 19/12/2019ರಂದು ಮಾನ್ಯ ಉಪಲೋಕಾಯುಕ್ತ–1 ರವರು ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಶಿರಹಟ್ಟಿಯ ಜನರಲ್ ಆಸ್ಪತ್ರೆಯ ಸ್ಥಳ ಪರಿಶೀಲನೆ ನಡೆಸಿದ್ದು, ದಿ:19/12/2019ರಂದು ನಡೆದ ಪ್ರಾಥಮಿಕ

ವಿಚಾರಣೆಯಲ್ಲಿ ಶಿರಹಟ್ಟಿಯ ಜನರಲ್ ಆಸ್ಪತ್ರೆಯಲ್ಲಿ ಔಷಧಿಗಳ ದಾಸ್ತಾನು ಮತ್ತು ವಿರತಣೆಗೆ ಸಂಬಂಧಿಸಿದಂತೆ ಈ ಕೆಳಗಿನ ನ್ಯೂನತೆಗಳು ಕಂಡು ಬಂದಿರುತ್ತದೆ:

(i) ರೋಗಿಗಳಿಗೆ ಔಷಧಿಗಳನ್ನು ವಿತರಿಸುತ್ತಿದ್ದ ಜನರಲ್ ಆಸ್ಪತ್ರೆಯ ಫಾರ್ಮಾಸಿಸ್ಟ್ ಶ್ರೀ.ಮೋಹನ್ ಚಬ್ಬಿ (3ನೇ ಎದುರುದಾರರು) ಅವರು OPD ಯಲ್ಲಿ ಔಷಧಿಗಳ ವಿತರಣೆಗಾಗಿ ರಿಜಿಸ್ಟರ್ ಅನ್ನು ನಿರ್ವಹಿಸಿರುವುದಿಲ್ಲ. ಜನರಲ್ ಆಸ್ಪತ್ರೆಯಲ್ಲಿ ಒಪಿಡಿ ರೋಗಿಗಳಿಗೆ ಔಷಧಿ ವಿತರಿಸುವ ದಾಖಲಾತಿಯನ್ನು ನಿರ್ವಹಣೆ ಮಾಡಿರುವುದನ್ನು ಆಡಳಿತ ವೈದ್ಯಾಧಿಕಾರಿ ನಮೂದಿಸಿರುವುದಿಲ್ಲ. ಔಷಧಿಯ ವಿತರಣಾ ರಿಜಿಸ್ಟರ್ ನಿರ್ವಹಣೆಯ ಅನುಪಸ್ಥಿತಿಯಲ್ಲಿ, ಅಂಗಡಿಗಳಿಂದ ನೀಡಲಾದ ಔಷಧಿಗಳನ್ನು ಹೊಂದಾಣಿಕೆ ಮಾಡಲು ಸಾಧ್ಯವಿಲ್ಲ.

(ii) ಅಂಗಡಿಗಳಿಂದ ಔಷಧಿಗಳ ವಿತರಣೆಯ ರಶೀದಿಯ ಸ್ಟಾಕ್ ರಿಜಿಸ್ಟರ್ ಅನ್ನು ಲಕ್ಷ್ಮೇಶ್ವರದಿಂದ ನಿಯೋಜನೆಯಲ್ಲಿದ್ದ ಫಾರ್ಮಾಸಿಸ್ಟ್ ಶ್ರೀ ಸುನೀಲ್ (4ನೇ ಎದುರುದಾರರು) ಅವರು ತಯಾರಿಸಿರುತ್ತಾರೆ. ಸ್ಟಾಕ್ ರಿಜಿಸ್ಟರ್ ತೆರೆಯುವ ದಿನಾಂಕವನ್ನು ನಮೂದಿಸಿರುವುದಿಲ್ಲ.

(iii) ದಿ.23/10/2019 ರಂದು ಸ್ಟಾಕ್ ರಿಜಿಸ್ಟರ್‌ನಲ್ಲಿನ ನೋಂದಣಿಗಳ ಪ್ರಕಾರ, 2500 ಅಮೋಕ್ಸಿಸಿಲಿನ್ 500 ಮಿಗ್ರಾಂ ಔಷಧಿಗಳನ್ನು ಗದಗ ಉಗ್ರಾಣದಿಂದ ಸ್ವೀಕರಿಸಲಾಗಿರುತ್ತದೆ. ದಿ:25/10/2019 ರಂದು, 1500 ಕ್ಯಾಪ್ಸುಲ್‌ಗಳನ್ನು ಒಪಿಡಿ ವಿಭಾಗಕ್ಕೆ ಕೊಟ್ಟಿದ್ದು, ಉಳಿಕೆ 1000 ಕ್ಯಾಪ್ಸುಲ್‌ಗಳು. ಒಪಿಡಿ ವಿಭಾಗಕ್ಕೆ 1500 ಕ್ಯಾಪ್ಸುಲ್‌ಗಳನ್ನು ನೀಡಿದ ಬಗ್ಗೆ ಸಂಚಿಕೆ ರಿಜಿಸ್ಟರ್‌ನಲ್ಲಿ ಅನುಗುಣವಾಗಿ ಯಾವುದೇ ನಮೂದು ಮಾಡಿರುವುದಿಲ್ಲ. ಕ್ಯಾಪ್ಸುಲ್‌ಗಳನ್ನು ನೀಡಿದ್ದಕ್ಕಾಗಿ ಮತ್ತು ಉಳಿಕೆ ಕ್ಯಾಪ್ಸುಲ್‌ಗಳ ಬಗ್ಗೆ ರಿಜಿಸ್ಟರ್‌ನಲ್ಲಿ ಯಾವುದೇ ಅನುಗುಣವಾಗಿ ನಮೂದು ಮಾಡಿರುವುದಿಲ್ಲ. ಒಪಿಡಿ ವಿಭಾಗದಲ್ಲಿ ಫಾರ್ಮಸಿಸ್ಟ್ ಅವರು ಔಷಧಿಗಳನ್ನು ಸ್ವೀಕೃತಿಗೆ ಸಂಬಂಧಿಸಿದಂತೆ ರಿಜಿಸ್ಟರ್‌ಗಳನ್ನು ನಿರ್ವಹಿಸಿರುವುದಿಲ್ಲ ಹಾಗೆಯೇ ರೋಗಿಗಳಿಗೆ ಪ್ರಿಸ್ಕ್ರಿಪ್ಷನ್ ಪ್ರಕಾರ ಔಷಧಿಗಳನ್ನು ನೀಡಿದ ಬಗ್ಗೆ ರಿಜಿಸ್ಟರನ್ನು ನಿರ್ವಹಿಸಿಲ್ಲ. ಆಡಳಿತ

ವೈದ್ಯಾಧಿಕಾರಿ ಈ ಲೋಪವನ್ನು ನಿರ್ಲಕ್ಷಿಸಿರುತ್ತಾರೆ. 1500 ಕ್ಯಾಪ್ಸುಲ್‌ಗಳನ್ನು ಒಪಿಡಿ ಗೆ ನೀಡಲಾಗಿದೆ ಎಂದು ತೋರಿಸಲಾಗಿದೆ. ಅಮೋಕ್ಸಿಸಿಲಿನ್ ಕ್ಯಾಪ್ಸುಲ್ ಫಲಿತಾಂಶದ ಸ್ಟಾಕ್ ಅನ್ನು ಸಮನ್ವಯಗೊಳಿಸಲು ಸಾಧ್ಯವಾಗಿರುವುದಿಲ್ಲ.

(iv) ದಿ.23/10/2019ರಂದು 3000 ಅಮೋಕ್ಸಿಸಿಲಿನ್ 125 ಮೈಗ್ರಾಂ ಕ್ಯಾಪ್ಸುಲ್‌ಗಳನ್ನು ಗದಗ ಉಗ್ರಾಣದಿಂದ ಕ್ಯಾಪ್ಸಗಳನ್ನು ಸ್ವೀಕರಿಸಲಾಗಿದೆ. ಸ್ಟಾಕ್ ರಿಜಿಸ್ಟರ್‌ನಲ್ಲಿ 2500 ಕ್ಯಾಪ್ಸುಲ್‌ಗಳನ್ನು ದಿ:25/10/2019ರಂದು ಒಪಿಡಿ ವಿಭಾಗಕ್ಕೆ ನೀಡಲಾಗಿದೆ. ಉಳಿಕೆ 500 ಎಂದು ನಮೂದಿಸಿದ್ದು, 2500 ಎಂದು ಮಾರ್ಪಾಸಿಲಾಗಿದೆ. ಸಂಚಿಕೆ ರಿಜಿಸ್ಟರ್‌ನಲ್ಲಿ ದಿ:25/10/2019 ರಂದು ಕ್ಯಾಪ್ಸುಲ್‌ಗಳನ್ನು ಒಪಿಡಿ ವಿಭಾಗಕ್ಕೆ ನೀಡಿದ ಬಗ್ಗೆ ನಮೂದು ಇರುವುದಿಲ್ಲ. ಆದರೆ ಒಪಿಡಿ ವಿಭಾಗದಲ್ಲಿ ಫಾರ್ಮಾಸಿಸ್ಟ್ ಅವರಿಂದ ಔಷಧಿಗಳನ್ನು ಪಡೆದುಕೊಂಡ ಬಗ್ಗೆ ರಿಜಿಸ್ಟರನ್ನು ಇಟ್ಟಿರುವುದಿಲ್ಲ. ಮತ್ತು ರೋಗಿಗಳಿಗೆ ಔಷಧ ಚೀಟಿ ಪ್ರಕಾರ ಔಷಧಿಗಳನ್ನು ವಿತರಿಸಿದ ಬಗ್ಗೆ ರಿಜಿಸ್ಟರ್ ಇಟ್ಟಿರುವುದಿಲ್ಲ.

(v) ದಿ:23/10/2019 ರಂದು ಗದಗ ಉಗ್ರಾಣದಿಂದ 7000 Atenolol ಮಾತ್ರೆಗಳನ್ನು ಸ್ವೀಕರಿಸಲಾಗಿರುತ್ತದೆ. ಸ್ಟಾಕ್ ರಿಜಿಸ್ಟರ್‌ನಲ್ಲಿನ ನಮೂದುಗಳ ಪ್ರಕಾರ, ದಿ:25/10/2019 ರಂದು, 2800 ಮಾತ್ರೆಗಳನ್ನು ಒಪಿಡಿ ಗೆ ನೀಡಲಾಗಿದೆ ಎಂದು ತೋರಿಸಲಾಗಿರುತ್ತದೆ ಮತ್ತು ದಿ:25/10/2010 ರಂತೆ ಉಳಿದಿರುವ ಬಾಕಿ 4200 ಆಗಿತ್ತು. ವಿತರಣಾ ನೋಂದಣಿಯಲ್ಲಿ ಯಾವುದೇ ನಮೂದು ಇರುವುದಿಲ್ಲ. ಒಪಿಡಿ ಗೆ ಮೇಲಿನ 2800 ಮಾತ್ರೆಗಳ ವಿತರಣೆ ಆಗಿರುತ್ತದೆ ಮತ್ತು ದಿ:13/11/2019 ರಂದು, ಗದಗ ಉಗ್ರಾಣದಿಂದ 7000 ಮಾತ್ರೆಗಳನ್ನು ಸ್ವೀಕರಿಸಲಾಗಿರುತ್ತದೆ, ಆ ಮೂಲಕ ಅಟೆನೊಲೊಲ್ ಮಾತ್ರೆಗಳ ಒಟ್ಟು ಬಾಕಿ 11200 ಇರುತ್ತದೆ. ಸ್ಟಾಕ್ ರಿಜಿಸ್ಟರ್‌ನಲ್ಲಿ ದಿ.9/11/2019 ರಿಂದ 30/11/2019 ರವರೆಗೆ 2520 ಮಾತ್ರೆಗಳನ್ನು ತೋರಿಸಲಾಗಿರುತ್ತದೆ. ಒಪಿಡಿಗೆ ನೀಡಲಾಗಿದೆ. ಸಂಚಿಕೆ ನೋಂದಣಿಯನ್ನು ಪರಿಶೀಲಿಸಿದಾಗ ದಿ:9/11/2019ರಂದು 5 ಘಟಕಗಳು ಅಂದರೆ 700 ಮಾತ್ರೆಗಳು ಕಂಡುಬಂದಿರುತ್ತವೆ. ದಿ:22/11/2019 ರಂದು 1400 ಮಾತ್ರೆಗಳು ಮತ್ತು ದಿ:25/11/2019ರಂದು 520 ಮಾತ್ರೆಗಳು ನೀಡಲಾಗಿದೆ ಎಂದು ತೋರಿಸಲಾಗಿರುತ್ತದೆ.

ದಿ:13/11/2019ಕ್ಕೆ Atenolol ಮಾತ್ರೆಗಳ ಬ್ಯಾಲೆನ್ಸ್ ಅನ್ನು 11200 ಎಂದು ತೋರಿಸಿದ್ದು, ಪುನ: ಮತ್ತೊಮ್ಮೆ ದಿ:9/11/2019ಕ್ಕೆ 11200 ರ ಬಾಕಿ ಕಡಿಮೆ ಮಾಡಲು ಸಾಧ್ಯವಿರುವುದಿಲ್ಲ. ಇದಲ್ಲದೆ, ಸಂಚಿಕೆ ರಿಜಿಸ್ಟರ್‌ನಲ್ಲಿ, ಮೇಲಿನ ಪ್ರಮಾಣದ Atenolol ಮಾತ್ರೆಗಳ ಸ್ವೀಕೃತಿಗಾಗಿ ಒಪಿಡಿ ಫಾರ್ಮಾಸಿಸ್ಟ್‌ರವರ ಯಾವುದೇ ಸ್ವೀಕೃತಿಯಿರುವುದಿಲ್ಲ.

(vi) ದಿ:9/12/2019ರಂದು, 1000 ಅಜಿತ್ರೊಮೈಸಿನ್ 250 ಮಿ.ಗ್ರಾಂ ಗದಗ ಉಗ್ರಾಣದಿಂದ ಮಾತ್ರೆಗಳನ್ನು ಸ್ವೀಕರಿಸಲಾಗಿರುತ್ತದೆ. ಸ್ಟಾಕ್ ರಿಜಿಸ್ಟರ್‌ನಲ್ಲಿ, ಒಪಿಡಿ ಗೆ ಅಜಿಥ್ರೊಮೈಸಿನ್ ಮಾತ್ರೆಗಳ ವಿತರಣೆಯನ್ನು 9–30.11.2019ರಿಂದ ತೋರಿಸಿದ್ದು, ನೀಡಲಾದ ಪ್ರಮಾಣವನ್ನು 200 ಎಂದು ತೋರಿಸಲಾಗಿರುತ್ತದೆ. ದಿ:9/12/2019ರಂದು ಅಜಿಥ್ರೊಮೈಸಿನ್ ಮಾತ್ರೆಗಳನ್ನು ಸ್ವೀಕರಿಸಿದ್ದ ಸಮಯದಲ್ಲಿ 9 ರಿಂದ 30ನೇ ತಾರೀಖು ನವೆಂಬರ್ 2019 ರವರೆಗೆ ನೀಡಲಾಗುವುದಿಲ್ಲ. ಅಜಿತ್ರೋಮೈಸಿನ್ 250 Mg ಮಾತ್ರೆಗಳನ್ನು ಒಪಿಡಿ ಗೆ 9 ರಿಂದ 30ನೇ ನವೆಂಬರ್ 2019 ರವರೆಗೆ ನೀಡಿರುವುದಕ್ಕೆ ಸಂಬಂಧಿಸಿದ ನಮೂದನ್ನು ಸಮನ್ವಯಗೊಳಿಸಲಾಗುವುದಿಲ್ಲ.

(vii) ದಿ:9/12/2019ರಂದು, 5000 ಅಮೋಕ್ಸಿಸಿಲಿನ್ – ಕ್ಲಾವುಲಾನಿಕ್ ಆಮ್ಲ 625 ಮಿಗ್ರಾಂ ಮಾತ್ರೆಗಳನ್ನು ಗದಗ ಉಗ್ರಾಣದಿಂದ ಸ್ವೀಕರಿಸಲಾಗಿರುತ್ತದೆ. ಮೇಲಿನ ಟ್ಯಾಬ್ಲೆಟ್‌ನ ವಿತರಣೆಯ ಬಗ್ಗೆ ಸ್ಟಾಕ್ ಪುಸ್ತಕದಲ್ಲಿ ಯಾವುದೇ ನಮೂದು ಇರುವುದಿಲ್ಲ. ಆದರೆ ಸಂಚಿಕೆ ರಿಜಿಸ್ಟರ್‌ನಲ್ಲಿ ದಿ:12/12/2012 ರಂದ 2 ಬಾಕ್ಸ್‌ಗಳು ಅಂದರೆ 200 ಮಾತ್ರೆಗಳನ್ನು ಒಪಿಡಿ ಮತ್ತು ದಿ:13/12/2019 ರಂದು 2 ಬಾಕ್ಸ್‌ಗಳನ್ನು ಅಂದರೆ 200 ಮಾತ್ರೆಗಳನ್ನು ಒಪಿಡಿಗೆ ನೀಡಲಾಗಿದೆ ಎಂದು ತೋರಿಸಲಾಗಿರುತ್ತದೆ. ಅಮೋಕ್ಸಿಸಿಲಿನ್ – ಕ್ಲಾವುಲಾನಿಕ್ ಆಸಿಡ್ 625 ಮಾತ್ರೆಗಳ ದಾಸ್ತಾನು ಪರಿಶೀಲಿಸಿದಾಗ ಕೇವಲ 38 ಬಾಕ್ಸ್‌ಗಳು ಅಂದರೆ 3800 ಮಾತ್ರೆಗಳು ಪತ್ತೆಯಾಗಿರುತ್ತವೆ. ಸ್ಟಾಕ್ ಬುಕ್ ಮತ್ತು ಭೌತಿಕ ಸಮತೋಲನದಲ್ಲಿ ಬ್ಯಾಲೆನ್ಸ್ ಭಾರಿ ವ್ಯತ್ಯಾಸವಿರುತ್ತದೆ.

(viii) ಉಗ್ರಾಣದ ರವಾನೆ ಹೊರಭಾಗದ ಪ್ರಕಾರ – ಇಚೆಡೆಂಟ್ ಸಂಖ್ಯೆ ಪ್ರಕಾರ, ದಿ:23/10/2019ರಂದು ಜನರಲ್ ಆಸ್ಪತ್ರೆ, ಶಿರಹಟ್ಟಿಗೆ ಸರಬರಾಜು ಮಾಡಿದ ಔಷಧಿಗಳ ಒಟ್ಟು ಮೌಲ್ಯ ರೂ.21,93,412.70/-, ದಿ:13/11/2019ರಂದು ರೂ.25,80,408.05 ಮತ್ತು ದಿ:9/12/2019ರಂದು ರೂ.28,41,581.69/- ಆಗಿರುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಔಷಧಗಳನ್ನು ಪೂರೈಸಿದಾಗ ಸ್ಟಾಕ್ ಬುಕ್, ಇಶ್ಯೂ ರಿಜಿಸ್ಟರ್ ಮತ್ತು ಲೆಕ್ಕ ನಿರ್ವಹಣೆ ವಹಿಗಳನ್ನು ಇಡದೇ ಇರುವುದರಿಂದ, ಲೆಕ್ಕ ನಿರ್ವಹಣೆ ಸರಿ ಇರುವುದಿಲ್ಲ. ಒಪಿಡಿ ರೋಗಿಗಳಿಗೆ ಔಷಧಗಳನ್ನು ನೀಡುವ ರಿಜಿಸ್ಟರ್ ಅನ್ನು ನಿರ್ವಹಿಸಲ್ಲವಾದ್ದರಿಂದ ಶಿರಹಟ್ಟಿಯ ಜನರಲ್ ಆಸ್ಪತ್ರೆಗೆ ಸರಬರಾಜು ಮಾಡಿದ ಔಷಧಿಗಳ ಕಳ್ಳತನ ಮತ್ತು ದುರ್ಬಳಕೆಗೆ ಅವಕಾಶ ನೀಡಿದಂತಾಗಿರುತ್ತದೆ.

3. ದೂರುದಾರರ ದೂರಿನ ಕುರಿತು 1 ರಿಂದ 4ನೇ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ,

1ನೇ ಎದುರುದಾರರು ತಮ್ಮ ಸೇವಾ ವಿವರಗಳು ಮತ್ತು ಪತ್ರಿಕಾ ಪ್ರಕಟಣೆಯನ್ನು ದಿನಾಂಕ 21/01/2020 ರಂದು ಸಲ್ಲಿಸಿರುತ್ತಾರೆ.

2ನೇ ಎದುರುದಾರರು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ದಿನಾಂಕ 19/12/2019 ರಂದು ತಾಲ್ಲೂಕು ಆಸ್ಪತ್ರೆ ಶಿರಹಟ್ಟಿಗೆ ಮಾನ್ಯ ಗೌರವಾನ್ವಿತ ಉಪಲೋಕಾಯುಕ್ತರು ಕರ್ನಾಟಕ ರಾಜ್ಯ ರವರ ಆಕಸ್ಮಿಕ ಭೇಟಿ ನೀಡಿ ಪರಿಶೀಲನೆ ಮಾಡಿದಾಗ ಆಸ್ಪತ್ರೆಯಲ್ಲಿ ನ್ಯೂನ್ಯತೆಗಳ ಕುರಿತು ಹಾಗೂ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿರುವುದರಿಂದ, ಅನುಪಾಲನ ವರದಿ ಈ ಕೆಳಕಂಡಂತಿದೆ:

| | | |
|---|---|---|
| 3(I) | ದಿನನಿತ್ಯ ಔಷಧಿ ವಿತರಣಾ ರಿಜಿಸ್ಟರ್ ಇಲ್ಲದಿರುವ ಕುರಿತು: | ➢ ಸದರಿ ತಾಲ್ಲೂಕು ಆಸ್ಪತ್ರೆ ಶಿರಹಟ್ಟಿಯಲ್ಲಿ ಮೂರು ಜನ ಫಾರ್ಮಾಸಿಸ್ಟ ಹುದ್ದೆಯಿದ್ದು, ಎರಡು ಹುದ್ದೆಗಳು ಖಾಲಿ ಇರುತ್ತದೆ ಹಾಗೂ ಓಪಿಡಿ ವಿಭಾಗದ ಕೆಲಸದ ಒತ್ತಡದಲ್ಲಿ ದಿನನಿತ್ಯದ ಓಪಿಡಿ ವಿತರಣಾ ಪುಸ್ತಕವು ನಮೂದಿಸಿರುವುದಿಲ್ಲಾ.<br>➢ ತಮ್ಮ ಸೂಚನೆಯಂತೆ ಸದರಿ ದಾಸ್ತಾನು ಪುಸ್ತಕವನ್ನು ಮಾಡಿರುತ್ತೇವೆ. ಅದರ ಪ್ರತಿಯನ್ನು ತಮಗೆ ಲಗತ್ತಿಸಲಾಗಿದೆ. |

| | | |
|---|---|---|
| 3(II) | ದಾಸ್ತಾನು ಪುಸ್ತಕದಲ್ಲಿ ಆರಂಭಿಸಿದ ದಿನಾಂಕ ನಮೂದಿಸದ ಕುರಿತು: | ➢ ತಮ್ಮ ಸೂಚನೆಯಂತೆ ಸದರಿ ದಾಸ್ತಾನು ಪುಸ್ತಕಗಳಲ್ಲಿ ಆರಂಭಿಸಿದ ದಿನಾಂಕವನ್ನು ದಾಖಲಿಸಲಾಗಿದೆ.<br>➢ ನನ್ನ ಸಮ್ಮುಖದಲ್ಲಿ ದಾಸ್ತಾನು ಪುಸ್ತಕವನ್ನು ಪರಿಶೀಲಿಸಲಾಗಿದೆ ಹಾಗೂ ಪ್ರತಿಯನ್ನು ಲಗತ್ತಿಸಲಾಗಿದೆ. |
| 3(III) | Cap Amoxicillin 500 Mg ಮಾತ್ರೆಯನ್ನು ದಿನವಹಿಯಲ್ಲಿ ಎಂಟ್ರಿ ಮಾಡದಿರುವ ಕುರಿತು: | ➢ ಓಪಿಡಿ ವಿಭಾಗದ ಫಾರ್ಮಾಸಿಸ್ಟ ಕೆಲಸದ ಒತ್ತಡದಲ್ಲಿ issue register ನ್ನು ನಮೂದಿಸಿರುವುದಿಲ್ಲಾ ಮತ್ತು ಇನ್ನು ಮುಂದೆ ಹಾಗೆ ಆಗದಂತೆ ನೋಡಿಕೊಳ್ಳಲು ಸೂಚಿಸಿರುತ್ತೇನೆ. |
| 3(IV) | Tab Amoxicillin 125 Mg ಮಾತ್ರೆಗೆ ಸಂಬಂಧಿಸಿದಂತೆ ದಾಸ್ತಾನು ಪುಸ್ತಕದಲ್ಲಿ ತಿದ್ದುಪಡಿ ಮಾಡಿರುವ ಕುರಿತು: | ➢ ಜಿಲ್ಲಾ ಔಷಧ ಉಗ್ರಾಣ ಗದಗ ಇವರಿಂದ ದಿನಾಂಕ 23/10/2019 ರಂದು Tab Amoxicillin 125 Mg 3000 ಮಾತ್ರೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ 2500 ಮಾತ್ರೆಗಳನ್ನು ದಿನಾಂಕ 25/10/2019 ರಂದು ಓಪಿಡಿ ವಿಭಾಗಕ್ಕೆ ವಿತರಿಸಲಾಗಿತ್ತು ದಾಸ್ತಾನು ಪುಸ್ತಕದಲ್ಲಿ 2500 ರ ಬದಲಾಗಿ 2300 ಎಂದು ತಪ್ಪಾಗಿ ನಮೂದಿಸಿದನ್ನು ತಕ್ಷಣವೇ ಗ್ರಹಿಸಿ ವಾಸ್ತವವಾಗಿ ವಿತರಿಸಿದ ಪ್ರಮಾಣ 2500 ಎಂದು ತಿದ್ದುಪಡಿಯನ್ನು ಮಾಡಲಾಗಿತ್ತು. (ದಿನಾಂಕ 25/10/2019 ರಂದು ಔಷದ ವಿತರಣೆಯ issue register ನ ಪ್ರತಿಯನ್ನು ಲಗತ್ತಿಸಿದೆ)<br>➢ ಇನ್ನು ಮುಂದೆ ಮುಖ್ಯ ಔಷಧ ದಾಸ್ತಾನು ಪುಸ್ತಕದಲ್ಲಿ ತಿದ್ದುಪಡಿ ಆಗದಂತೆ ನೋಡಿಕೊಳ್ಳಲು ಆದೇಶಿಸಲಾಗಿದೆ. |
| 3(V) | Tab Atenolol 50 Mg ಮಾತ್ರೆಯನ್ನು ದಿನವಹಿಯಲ್ಲಿ ಎಂಟ್ರಿ ಮಾಡದಿರುವ ಹಾಗೂ ಉಪಯೋಗಿಸಿರುವ ಪ್ರಮಾಣವನ್ನು ದಾಸ್ತಾನು ಪುಸ್ತಕದಲ್ಲಿ ತಡವಾಗಿ | ➢ ಓಪಿಡಿ ವಿಭಾಗದ ಫಾರ್ಮಾಸಿಸ್ಟ ಕೆಲಸದ ಒತ್ತಡದಲ್ಲಿ issue register ಅನ್ನು ನಮೂದಿಸಿರುವುದಿಲ್ಲಾ ಮತ್ತು ಇನ್ನು ಮುಂದೆ ಹಾಗೆ ಆಗದಂತೆ ನೋಡಿಕೊಳ್ಳಲು ಸೂಚಿಸಿರುತ್ತೇನೆ.<br>➢ ಸಂಬಂಧಪಟ್ಟ ದಾಖಲಾತಿಯನ್ನು ಲಗತ್ತಿಸಲಾಗಿದೆ. |

| | | |
|---|---|---|
| | ದಾಖಲಿಸಿರುವ ಕುರಿತು: | |
| 3(VI) | Azithromycin Tablet 250 Mg ಮಾತ್ರೆಗಳಿಗೆ ಸಂಬಂಧಪಟ್ಟಂತೆ ಉಪಯೋಗಿಸಿದ ದಿನಾಂಕವನ್ನು ತಪ್ಪಾಗಿ ನಮೂದಿಸಿರುವ ಕುರಿತು: | ➢ ದಿನಾಂಕ 09/12/2019 ರಂದು Azithromycin Tablet 250 Mg 1000 ಮಾತ್ರೆಗಳನ್ನು ಜಿಲ್ಲಾ ಔಷಧ ಉಗ್ರಾಣದಿಂದ ಸ್ವೀಕರಿಸಲಾಗಿತ್ತು ಸದರಿ ಔಷಧವನ್ನು ದಿನಾಂಕ 10/12/2019 ರಂದು ಓಪಿಡಿ ವಿಭಾಗಕ್ಕೆ ವಿತರಿಸಲಾಗಿತ್ತು ಆದರೆ ದಾಸ್ತಾನು ಪುಸ್ತಕದಲ್ಲಿ 10/12/2019 ಎಂದು ನಮೂದಿಸಿರುವುದರ ಬದಲಾಗಿ 9-30/11/2019 ಎಂದು ತಪ್ಪಾಗಿ ನಮೂದಿಸಲಾಗಿದೆ ಆದರೆ ವಾಸ್ತವವಾಗಿ 10/12/2019 ರಂದು ಓಪಿಡಿ ವಿಭಾಗಕ್ಕೆ ವಿತರಿಸಲಾಗಿದ್ದು ಸಂಬಂಧಪಟ್ಟ ದಿನವಹಿಯ ಪ್ರತಿಯನ್ನು ಲಗತ್ತಿಸಿದೆ. Azithromycin Tablet 250 Mg ಸ್ವೀಕೃತಿ ಹಾಗೂ ವಿತರಣೆಯ ವಿವರ ಈ ಕೆಳಗಿನಂತಿದ್ದು ದಾಸ್ತಾನು ಪುಸ್ತಕದಲ್ಲಿನ ಬಾಕಿ ಉಳಿದ ಪ್ರಮಾಣ ಹಾಗೂ ಭೌತಿಕವಾಗಿ ಲಭ್ಯವಿದ್ದ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ.<br>➢ ನನ್ನ ಸಮ್ಮುಖದಲ್ಲಿ ಪರಿಶೀಲಿಸಲಾಗಿದೆ ಹಾಗೂ ಅದರ ಪ್ರತಿಯನ್ನು ಲಗತ್ತಿಸಲಾಗಿದೆ. |
| 3(VII) | Amoxicillin + Clavulinic Acid Tablet 625 Mg 5000 ಮಾತ್ರೆಗಳಿಗೆ ಸಂಬಂಧಿಸಿದಂತೆ ದಾಸ್ತಾನು ಪುಸ್ತಕದಲ್ಲಿನ ಪ್ರಮಾಣ ಹಾಗೂ ಭೌತಿಕ ದಾಸ್ತಾನಿನಲ್ಲಿನ ವ್ಯತ್ಯಾಸದ ಕುರಿತು: | ➢ ಪರಿಶೀಲನಾ ಸಮಯದಲ್ಲಿ ದಿನವಹಿಯನ್ನು ಪರಿಗಣಿಸದೇ ಕೇವಲ ದಾಸ್ತಾನು ಪುಸ್ತಕದಲ್ಲಿ ಬಾಕಿ ಉಳಿದ ಮಾತ್ರೆಗಳನ್ನು ಭೌತಿಕವಾಗಿ ಲಭ್ಯವಿದ್ದ ದಾಸ್ತಾನಿಗೆ ಹೋಲಿಕೆ ಮಾಡಲಾಗಿ ವ್ಯತ್ಯಾಸವಿರುವುದಾಗಿ ತಿಳಿಸಿರುತ್ತಾರೆ ಆದರೆ ವಾಸ್ತವವಾಗಿ ಆಸ್ಪತ್ರೆಯ ವಿವಿಧ ವಿಭಾಗಗಳು ಸ್ವೀಕರಿಸಿದ ಔಷಧಗಳ ಪ್ರಮಾಣವನ್ನು ದಿನವಹಿಯಲ್ಲಿ ನಮೂದಿಸಲಾಗುತ್ತದೆ. ಸದರಿ ದಿನವಹಿಯ ಮುಖಾಂತರ ವಿತರಿಸಲಾದ ಪ್ರಮಾಣದ ಜೊತೆಗೆ ಭೌತಿಕವಾಗಿ ಲಭ್ಯವಿರುವ ಪ್ರಮಾಣವು ದಾಸ್ತಾನು ಪುಸ್ತಕದಲ್ಲಿನ ಪ್ರಮಾಣವು ಒಂದೇಯಾಗಿರುತ್ತದೆ.<br>➢ ನನ್ನ ಸಮ್ಮುಖದಲ್ಲಿ ಪರಿಶೀಲಿಸಲಾಗಿದೆ ಹಾಗೂ ಪ್ರತಿಯನ್ನು ಲಗತ್ತಿಸಲಾಗಿದೆ. |

| | | |
|---|---|---|
| 3(VIII) | ಆಸ್ಪತ್ರೆಗೆ ಪೂರೈಕೆಯಾದ ಔಷಧಗಳ ಒಟ್ಟು ಮೊತ್ತದ ಕುರಿತು: | ➢ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ 2019 ತಿಂಗಳಿನಲ್ಲಿ ಈ ಆಸ್ಪತ್ರೆಗೆ ರೂ 891660.91 ಗಳ ಮೌಲ್ಯದ ಔಷಧಗಳು ಸರಬರಾಜು ಆಗಿರುತ್ತವೆ. ಔಷಧಗಳು ಸರಬರಾಜಾಗುವ ಇನ್ವಯಿಸ್‌ನಲ್ಲಿ ಸರಬರಾಜಾಗಿರುವ ಔಷಧಿಗಳ ಮೊತ್ತ ಹಾಗೂ ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ ಆಸ್ಪತ್ರೆಗೆ ಪೂರೈಕೆಯಾಗಿರುವ ಒಟ್ಟು ಮೊತ್ತವನ್ನು ಪ್ರತ್ಯೇಕವಾಗಿ ನಮೂದಿಸಲಾಗಿದ್ದು, ಪರಿಶೀಲನೆಯ ವೇಳೆಯಲ್ಲಿ ಪ್ರಸಕ್ತ ಸಾಲಿನಲ್ಲಿ (ಮಾರ್ಚ್ 2019 ರಿಂದ ಡಿಸೆಂಬರ್ 2019 ರವರೆಗೆ) ಸರಬರಾಜಾದ ಔಷಧಗಳ ಒಟ್ಟು ಮೊತ್ತವನ್ನು ಪರಿಗಣಿಸಲಾಗಿದೆ (ರೂ. 76.00 ಲಕ್ಷ) ವಾಸ್ತವವಾಗಿ ಆ ಅವಧಿಯಲ್ಲಿ ಈ ಆಸ್ಪತ್ರೆಗೆ ಸರಬರಾಜಾಗಿರುವ ಮೊತ್ತ ರೂ. 891660.91 ಗಳು ಆಗಿರುತ್ತದೆ. ಸದರಿ ಔಷಧಗಳು ಸರಬರಾಜಾಗಿರುವ ಇನ್ವಯಿಸ್‌ಗಳ ಪ್ರತಿಗಳೊಂದಿಗೆ ಸಂಪೂರ್ಣ ಮಾಹಿತಿಯನ್ನು ಸಲ್ಲಿಸಲಾಗಿದೆ. |

3ನೇ ಎದುರುದಾರರು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ ದಿನಾಂಕ 19/12/2019 ರಂದು ತಾವು ಭೇಟಿ ನೀಡಿದಾಗ ಔಷಧಾಲಯದಲ್ಲಿ ದಿನನಿತ್ಯ ಹೊರರೋಗಿಗಳಿಗೆ ಔಷಧಿ ವಿತರಣಾ ರಿಜಿಸ್ಟರ್ ಮಾಡಿರುವುದಿಲ್ಲದರ ಬಗ್ಗೆ ಪರಿಶೀಲನೆ ಮಾಡಿ ತಾವು ಆಕ್ಷೇಪಣೆವಿದ್ದು ಸದರಿ ಸಂಸ್ಥೆಯಲ್ಲಿ ಮೂರು ಜನ ಫಾರ್ಮಾಸಿಸ್ಟ ಹುದ್ದೆಯಿದ್ದು 2 ಜನ ಫಾರ್ಮಾಸಿಸ್ಟ 2019-20ನೇ ಸಾಲಿನಲ್ಲಿ ವರ್ಗಾವಣೆ ಆಗಿರುತ್ತಾರೆ ಮತ್ತು ಈ ಹಿಂದೆ 1 ವರ್ಷದಿಂದ ನನ್ನ ಆರೋಗ್ಯ ಸರಿ ಇಲ್ಲದ ಕಾರಣ ನನಗೆ ಕೆಲಸ ನಿರ್ವಹಿಸಲು ತೊಂದರೆಯಾಗಿರುತ್ತದೆ ಹಾಗೂ ತಾವು ಭೇಟಿ ನೀಡಿದ ದಿನಾಂಕದಿಂದ 19/12/2019 ದಿನನಿತ್ಯ ಔಷಧಿ ವಿತರಣಾ ರಿಜಿಸ್ಟರ್ ಪ್ರಾರಂಭಿಸಲಾಗಿದೆ ಹಾಗೂ ಅದರ ಪ್ರತಿಯನ್ನು ಲಗತ್ತಿಸಲಾಗಿದೆ. ಇನ್ನು ಮುಂದೆ ಹೀಗಾಗದಂತೆ ಕೆಲಸದಲ್ಲಿ ನಿಗಾವಹಿಸಿ ನನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗುತ್ತೇನೆ. ಈ ನನ್ನ ತಪ್ಪನ್ನು ಕ್ಷಮಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ.

4ನೇ ಎದುರುದಾರರು ದಿನಾಂಕ 20/01/2020 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಶಿರಹಟ್ಟಿ ಇವರ ಆದೇಶದ ಮೇರೆಗೆ ಮಾನ್ಯ ಆಡಳಿತ ವೈದ್ಯಾಧಿಕಾರಿಗಳು ಸಮುದಾಯ ಆರೋಗ್ಯ ಕೇಂದ್ರ ಲಕ್ಷ್ಮೇಶ್ವರ್ ಇವರು ಹೊರಡಿಸಿರುವ ಕಛೇರಿ ಜ್ಞಾಪನಾ ಪತ್ರ ದಿನಾಂಕ 11/10/2019 ರನ್ವಯ ಫಾರ್ಮಸಿಸ್ಟ್ ಸಿಬ್ಬಂದಿಗಳ ಕೊರತೆಯಿರುವ ಸಾರ್ವಜನಿಕ ಆಸ್ಪತ್ರೆ ಶಿರಹಟ್ಟಿ ಜಿಲ್ಲೆ ಗದಗ ಇಲ್ಲಿಗೆ ಕಾರ್ಯ ಹೊಂದಾಣಿಕೆಯ ಆಧಾರದ ಮೇಲೆ ವಾರದಲ್ಲಿ 2 ದಿನ (ಮಂಗಳವಾರ ಹಾಗೂ ಶನಿವಾರ) ನಿಯೋಜಿಸಿ ಆದೇಶಿಸಿರುತ್ತಾರೆ. ಅದರನ್ವಯ ದಿನಾಂಕ 15/10/2019 ರಂದು ಸಾರ್ವಜನಿಕ ಆಸ್ಪತ್ರೆ ಶಿರಹಟ್ಟಿ ಇಲ್ಲಿಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ದಿನಾಂಕ 19/12/2019 ರಂದು ಮಾನ್ಯ ಉಪಲೋಕಾಯುಕ್ತರು ನಡೆಸಿದ ಪರೀವಿಕ್ಷಣಾ ಸಮಯಕ್ಕೆ ಸದರಿ ಆರೋಗ್ಯ ಸಂಸ್ಥೆಯಲ್ಲಿ ನಿಯೋಜನೆಗೊಂಡು ಕೇವಲ 2 ತಿಂಗಳುಗಳಾಗಿರುತ್ತದೆ, ವಾರದಲ್ಲಿ ಕೇವಲ 2 ದಿನಗಳು ಮಾತ್ರ ನಿಯೋಜನೆಗೊಂಡಿರುವುದರಿಂದ ಉಗ್ರಾಣಕ್ಕೆ ಸಂಬಂಧಪಟ್ಟ ಇತರೇ ದಿನಗಳ ಎಲ್ಲಾ ಕೆಲಸ ಕಾರ್ಯಗಳನ್ನು 2 ದಿನಗಳಲ್ಲಿ ನಿರ್ವಹಿಸುವ ಅನಿವಾರ್ಯತೆ ಉಂಟಾಗಿರುತ್ತದೆ.

| | | |
|---|---|---|
| 3(II) | ದಾಸ್ತಾನು ಮಸ್ತಕದಲ್ಲಿ ಆರಂಭಿಸಿದ ದಿನಾಂಕ ನಮೂದಿಸದ ಕುರಿತು: | ➢ ಮಾನ್ಯ ಆಡಳಿತ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಶಿರಹಟ್ಟಿ ಇವರು, ನಿಯೋಜನೆ ಮೇರೆಗೆ ಕರ್ತವ್ಯಕ್ಕೆ ಹಾಜರಾದ ದಿನಾಂಕದಂದು ಆಸ್ಪತ್ರೆಯ ಮುಖ್ಯ ಔಷಧ ಉಗ್ರಾಣದಲ್ಲಿರುವ ಔಷಧ ರಾಸಾಯನಿಕಗಳ ಭೌತಿಕ ದಾಸ್ತಾನನ್ನು ಪರಿಗಣನೆಗೆ ತೆಗೆದುಕೊಂಡು ದಾಸ್ತಾನು ಮಸ್ತಕಗಳನ್ನು ನಿರ್ವಹಣೆಯನ್ನು ಮಾಡಲು ಸೂಚಿಸಿರುತ್ತಾರೆ. ಅದರನ್ವಯ ಆಸ್ಪತ್ರೆಯ್ಲಿನ ಔಷಧ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ದಾಸ್ತಾನು ಮಸ್ತಕಗಳನ್ನು ನಿರ್ವಹಿಸಲಾಗಿದ್ದು ಸದರಿ ದಾಸ್ತಾನು ಮಸ್ತಕಗಳಿಗೆ ದೃಢೀಕರಣ ಪತ್ರವನ್ನು ನಮೂದಿಸಲಾಗಿದೆ, ಆದರೆ ಸದರಿ ದೃಢೀಕರಣ ಪತ್ರದಲ್ಲಿ ದಾಸ್ತಾನು ಮಸ್ತಕ ಆರಂಭಿಸಿದ ದಿನಾಂಕವನ್ನು ನಜರುಚುಕಿನಿಂದ ನಮೂದಿಸಲಾಗಿರುವುದಿಲ್ಲ.<br>➢ ತಮ್ಮ ಸೂಚನೆಯಂತೆ ಸದರಿ ದಾಸ್ತಾನು ಮಸ್ತಕಗಳಲ್ಲಿ ಆರಂಭಿಸಿದ ದಿನಾಂಕವನ್ನು ದಾಖಲಿಸಲಾಗಿದೆ. |
| 3(III) | Cap | ➢ ಜಿಲ್ಲಾ ಔಷಧ ಉಗ್ರಾಣ ಗದಗ ಇವರಿಂದ ದಿನಾಂಕ |

| | | |
|---|---|---|
| | Amoxicillin 500 Mg ಮಾತ್ರೆಯನ್ನು ದಿನವಹಿಯಲ್ಲಿ ಎಂಟ್ರಿ ಮಾಡದಿರುವ ಕುರಿತು: | 23/10/2019 ರಂದು Cap Amoxicillin 500 Mg 2500 ಮಾತ್ರೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ 1500 ಮಾತ್ರೆಗಳನ್ನು ದಿನಾಂಕ 25/10/2019 ರಂದು ನನ್ನ ಅನುಪಸ್ಥಿತಿಯಲ್ಲಿ ಓಪಿಡಿ ವಿಭಾಗದವರು ರೋಗಿಗಳ ವಿತರಣೆಗಾಗಿ ಸ್ವೀಕರಿಸಿರುತ್ತಾರೆ ಆದರೆ ನನ್ನ ಅನುಪಸ್ಥಿತಿಯಲ್ಲಿ ಸದರಿ ಔಷಧವನ್ನು ಸ್ವೀಕರಿಸಿ issue register ನಲ್ಲಿ ಕೆಲಸದ ಒತ್ತಡದಲ್ಲಿ ನಮೂದಿಸಲಾಗಿರುವುದಿಲ್ಲ. |
| 3(IV) | Tab Amoxicillin 125 Mg ಮಾತ್ರೆಗೆ ಸಂಬಂಧಿಸಿದಂತೆ ದಾಸ್ತಾನು ಮಸ್ತಕದಲ್ಲಿ ತಿದ್ದುಪಡಿ ಮಾಡಿರುವ ಕುರಿತು: | ➢ ಜಿಲ್ಲಾ ಔಷಧ ಉಗ್ರಾಣ ಗದಗ ಇವರಿಂದ ದಿನಾಂಕ 23/10/2019 ರಂದು Tab Amoxicillin 125 Mg 3000 ಮಾತ್ರೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ 2500 ಮಾತ್ರೆಗಳನ್ನು ದಿನಾಂಕ 25/10/2019 ರಂದು ಓಪಿಡಿ ವಿಭಾಗಕ್ಕೆ ವಿತರಿಸಲಾಗಿತ್ತು ದಾಸ್ತಾನು ಮಸ್ತಕದಲ್ಲಿ 2500 ರ ಬದಲಾಗಿ 2300 ಎಂದು ತಪ್ಪಾಗಿ ನಮೂದಿಸಿದನ್ನು ತಕ್ಷಣವೇ ಗ್ರಹಿಸಿ ವಾಸ್ತವವಾಗಿ ವಿತರಿಸಿದ ಪ್ರಮಾಣ 2500 ಎಂದು ತಿದ್ದುಪಡಿಯನ್ನು ಮಾಡಲಾಗಿತ್ತು. (ದಿನಾಂಕ 25/10/2019 ರಂದು ಔಷದ ವಿತರಣೆಯ issue register ನ ಪ್ರತಿಯನ್ನು ಲಗತ್ತಿಸಿದೆ) |
| 3(V) | Tab Atenolol 50 Mg ಮಾತ್ರೆಯನ್ನು ದಿನವಹಿಯಲ್ಲಿ ಎಂಟ್ರಿ ಮಾಡದಿರುವ ಹಾಗೂ ಉಪಯೋಗಿಸಿರುವ ಪ್ರಮಾಣವನ್ನು ದಾಸ್ತಾನು ಮಸ್ತಕದಲ್ಲಿ ತಡವಾಗಿ ದಾಖಲಿಸಿರುವ ಕುರಿತು: | ➢ ಜಿಲ್ಲಾ ಔಷಧ ಉಗ್ರಾಣ ಗದಗ ಇವರಿಂದ ದಿನಾಂಕ 23/10/2019 ರಂದು ಖಿಚಿಛ ಂಣಜಟಿಂಟಂಟ 50 Mg 7000(1*14*10) ಮಾತ್ರೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ 2800 ಮಾತ್ರೆಗಳನ್ನು ದಿನಾಂಕ 25/10/2019 ರಂದು ನನ್ನ ಅನುಪಸ್ಥಿತಿಯಲ್ಲಿ ಓಪಿಡಿ ವಿಭಾಗದವರು ರೋಗಿಗಳ ವಿತರಣೆಗಾಗಿ ಸ್ವೀಕರಿಸಿ ಕೆಲಸದ ಒತ್ತಡದಲ್ಲಿ ದಿನವಹಿಯಲ್ಲಿ ಎಂಟ್ರಿ ಮಾಡಲು ಸಾಧ್ಯವಾಗಿರುವುದಿಲ್ಲ. ತದನಂತರ ದಿನಾಂಕ 13/11/2019 ರಂದು ಜಿಲ್ಲಾ ಔಷಧ ಉಗ್ರಾಣದಿಂದ 7000 ಮಾತ್ರೆಗಳು ಪೂರೈಕೆಯಾಗಿರುತ್ತವೆ. ಉಗ್ರಾಣದಲ್ಲಿ ದಿನಾಂಕ 13/11/2019 ರಂದು Tab |

| | | |
|---|---|---|
| | | Atenolol 50 Mg ಮಾತ್ರೆಗಳ ಬಾಕಿ ಉಳಿದಿರುವ ಪ್ರಮಾಣ 11200 ಆಗಿರುತ್ತದೆ. ಆದರೆ ದಿನಾಂಕ 09/11/2019 ರಂದು ಓಪಿಡಿ ವಿಭಾಗಕ್ಕೆ 700 ಮಾತ್ರೆಗಳನ್ನು, 22/11/2019 ರಂದು 1400 ಮಾತ್ರೆಗಳನ್ನು ಹಾಗೂ 25/11/2019 ರಂದು 420 ಮಾತ್ರೆಗಳನ್ನು ವಿತರಿಸಲಾಗಿ ಒಟ್ಟು ಕ್ರೂಢೀಕೃತ 2520 ಮಾತ್ರೆಗಳನ್ನು ಒಮ್ಮೆಲೇ ತಿಂಗಳು ವಾರು ಖರ್ಚನ್ನು ನಮೂದಿಸಲಾಗಿದೆ. ದಿನಾಂಕ 13/11/2019 ರಂದು ಜಿಲ್ಲಾ ಔಷಧ ಉಗ್ರಾಣದಿಂದ ಸರಬರಾಜಾದ ಮಾತ್ರೆಗಳನ್ನು ದಾಸ್ತಾನು ಪುಸ್ತಕದಲ್ಲಿ ಸ್ವೀಕರಿಸಿದ ನಂತರ ದಿನಾಂಕ 09/11/2019 ರಂದು ವಿತರಿಸಿದ ಪ್ರಮಾಣವು, ಕ್ರೂಢೀಕೃತ ಒಟ್ಟು ಪ್ರಮಾಣ 2520 ರಂದು ಒಳಗೊಂಡಿರುತ್ತದೆ. ವಾರದಲ್ಲಿ ಕೇವಲ 2 ದಿನ ಈ ಆರೋಗ್ಯ ಸಂಸ್ಥೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವುದರಿಂದ ಪ್ರತಿನಿತ್ಯ ಉಪಯೋಗಿಸಿದ ಮಾತ್ರೆಗಳನ್ನು ಕ್ರೂಢೀಕೃತ ಒಟ್ಟು ಪ್ರಮಾಣವನ್ನು ನಮೂದಿಸಲಾಗಿದೆ. ಪರಿಶೀಲನಾ ಸಮಯದಲ್ಲಿ ಭೌತಿಕವಾಗಿ ಹಾಗೂ ದಾಸ್ತಾನು ಪುಸ್ತಕದಲ್ಲಿ 8680 ಮಾತ್ರೆಗಳು ಲಭ್ಯವಿದ್ದು ದಾಸ್ತಾನಿನಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿರುವುದಿಲ್ಲ. |

| | ಔಷಧಿಯ ಹೆಸರು | ಆರಂಭಿಕ ಪ್ರಮಾಣ **(As on** 23/10/19) | ಸ್ವೀಕರಿಸಿದ ಪ್ರಮಾಣ (23/10/19 ರಿಂದ 19/12/2019 | ಒಟ್ಟು ಪ್ರಮಾಣ **(As on** 19/12/19) | ಉಪಯೋಗಿಸಿದ ಪ್ರಮಾಣ | ಬಾಕಿ ಉಳಿದ ಪ್ರಮಾಣ |
|---|---|---|---|---|---|---|
| 01 | Tab Atenolol 50 Mg (1*14*10) | 0 | 14000 | 14000 | 5320 | 8680 |

| | | |
|---|---|---|
| 3(VI) | Azithromycin Tablet 250 Mg ಮಾತ್ರೆಗಳಿಗೆ ಸಂಬಂಧಪಟ್ಟಂತೆ ಉಪಯೋಗಿಸಿದ ದಿನಾಂಕವನ್ನು ತಪ್ಪಾಗಿ ನಮೂದಿಸಿರುವ ಕುರಿತು: | ➢ ದಿನಾಂಕ 09/12/2019 ರಂದು Azithromycin Tablet 250 Mg 1000 ಮಾತ್ರೆಗಳನ್ನು ಜಿಲ್ಲಾ ಔಷಧ ಉಗ್ರಾಣದಿಂದ ಸ್ವೀಕರಿಸಲಾಗಿತ್ತು ಸದರಿ ಔಷಧವನ್ನು ದಿನಾಂಕ 10/12/2019 ರಂದು ಓಪಿಡಿ ವಿಭಾಗಕ್ಕೆ ವಿತರಿಸಲಾಗಿತ್ತು ಆದರೆ ದಾಸ್ತಾನು ಪುಸ್ತಕದಲ್ಲಿ 10/12/2019 ಎಂದು ನಮೂದಿಸಿರುವುದರ ಬದಲಾಗಿ 9-30/11/2019 ಎಂದು ತಪ್ಪಾಗಿ ನಮೂದಿಸಲಾಗಿದೆ ಆದರೆ ವಾಸ್ತವವಾಗಿ 10/12/2019 ರಂದು ಓಪಿಡಿ ವಿಭಾಗಕ್ಕೆ ವಿತರಿಸಲಾಗಿದ್ದು ಸಂಬಂಧಪಟ್ಟ ವಿವರಣೆಯ ಪ್ರತಿಯನ್ನು ಲಗತ್ತಿಸಿದೆ. Azithromycin Tablet 250 Mg ಸ್ವೀಕೃತಿ ಹಾಗೂ ವಿತರಣೆಯ ವಿವರ ಈ ಕೆಳಗಿನಂತಿದ್ದು ದಾಸ್ತಾನು ಪುಸ್ತಕದಲ್ಲಿನ ಬಾಕಿ ಉಳಿದ ಪ್ರಮಾಣ ಹಾಗೂ ಭೌತಿಕವಾಗಿ ಲಭ್ಯವಿದ್ದ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. |

| ಕ್ರ. ಸಂ. | ಔಷಧಿಯ ಹೆಸರು | ಸ್ವೀಕರಿಸಿದ ಪ್ರಮಾಣ | ಡಿಸೆಂಬರ್ ತಿಂಗಳಿನಲ್ಲಿ ವಿತರಣೆಯಾದ ಪ್ರಮಾಣ | | | ಭೌತಿಕ ದಾಸ್ತಾನು |
|---|---|---|---|---|---|---|
| | | | ದಿನಾಂಕ | ವಿಭಾಗ | ಪ್ರಮಾಣ | |
| 01 | Azithromycin Tablet 250 mg | 1000 | 10/12/2019 | ಓಪಿಡಿ | 200 | 400 |
| | | | 12/12/2019 | ಓಪಿಡಿ | 100 | |
| | | | 13/12/2019 | ಓಪಿಡಿ | 100 | |
| | | | 19/12/2019 | ಓಪಿಡಿ | 200 | |
| ಡಿಸೆಂಬರ್ ತಿಂಗಳಿನಲ್ಲಿ ಒಟ್ಟು ವಿತರಣೆಯಾದ ಪ್ರಮಾಣ: | | | | | 600 | |

| | | |
|---|---|---|
| 3(VII) | Amoxicillin + Clavulinic Acid Tablet 625 Mg 5000 | ➢ ದಿನಾಂಕ 09/12/2019 ರಂದು Amoxicillin + Clavulinic Acid Tablet 625 Mg 5000 ಮಾತ್ರೆಗಳನ್ನು ಜಿಲ್ಲಾ ಔಷಧ ಉಗ್ರಾಣದಿಂದ ಸ್ವೀಕರಿಸಲಾಗಿದೆ. ನನ್ನ ಅನುಪಸ್ಥಿತಿಯಲ್ಲಿ ಓಪಿಡಿ ವಿಭಾಗಕ್ಕೆ |

| | | |
|---|---|---|
| | ಮಾತ್ರೆಗಳಿಗೆ ಸಂಬಂಧಿಸಿದಂತೆ ದಾಸ್ತಾನು ಮಸ್ತಕದಲ್ಲಿನ ಪ್ರಮಾಣ ಹಾಗೂ ಭೌತಿಕ ದಾಸ್ತಾನಿನಲ್ಲಿನ ವ್ಯತ್ಯಾಸದ ಕುರಿತು: | ರೋಗಿಗಳಿಗೆ ಔಷಧ ವಿರಣೆಗಾಗಿ ಪಡೆಯಲಾಗುತ್ತಿದ್ದ ಔಷಧ ರಾಸಾಯನಿಕಗಳನ್ನು ದಿನವಹಿಯಲ್ಲಿ ನಮೂದಿಸಲಾಗಿತ್ತು. ಸದರಿ ದಿನವಹಿಯ ಕ್ರೂಢೀಕೃತ ಮಾಹಿತಿಯನ್ನು ದಾಸ್ತಾನು ಮಸ್ತಕದಲ್ಲಿ ದಾಖಲಿಸಲಾಗುತ್ತಿತ್ತು. ಪರಿಶೀಲನಾ ಸಮಯದಲ್ಲಿ ದಿನವಹಿಯನ್ನು ಪರಿಗಣಿಸದೇ ಕೇವಲ ದಾಸ್ತಾನು ಮಸ್ತಕದಲ್ಲಿ ಬಾಕಿ ಉಳಿದ ಮಾತ್ರೆಗಳನ್ನು ಭೌತಿಕವಾಗಿ ಲಭ್ಯವಿದ್ದ ದಾಸ್ತಾನಿಗೆ ಹೋಲಿಕೆ ಮಾಡಲಾಗಿ ವ್ಯತ್ಯಾಸವಿರುವುದಾಗಿ ತಿಳಿಸಿರುತ್ತಾರೆ ಆದರೆ ವಾಸ್ತವವಾಗಿ ಆಸ್ಪತ್ರೆಯ ವಿವಿಧ ವಿಭಾಗಗಳು ಸ್ವೀಕರಿಸಿದ ಔಷಧಗಳ ಪ್ರಮಾಣವನ್ನು ದಿನವಹಿಯಲ್ಲಿ ನಮೂದಿಸಲಾಗುತ್ತದೆ. ಸದರಿ ದಿನವಹಿಯ ಮುಖಾಂತರ ವಿತರಿಸಲಾದ ಪ್ರಮಾಣದ ಜೊತೆಗೆ ಭೌತಿಕವಾಗಿ ಲಭ್ಯವಿರುವ ಪ್ರಮಾಣವು ದಾಸ್ತಾನು ಮಸ್ತಕದಲ್ಲಿನ ಪ್ರಮಾಣವು ಒಂದೇಯಾಗಿರುತ್ತದೆ. ಸದರಿ Amoxicillin + Clavulinic Acid Tablet 625 Mg ದಾಸ್ತಾನು ಸ್ವೀಕೃತಿ ಹಾಗೂ ವಿತರಣೆಯ ವಿವರ ಈ ಕೆಳಗಿನಂತಿರುತ್ತದೆ. |

| ಕ್ರ. ಸಂ. | ಔಷಧಿಯ ಹೆಸರು | ಸ್ವೀಕರಿಸಿದ ಪ್ರಮಾಣ | ಡಿಸೆಂಬರ್ ತಿಂಗಳಿನಲ್ಲಿ ವಿತರಣೆಯಾದ ಪ್ರಮಾಣ | | | ಭೌತಿಕ ದಾಸ್ತಾನು |
|---|---|---|---|---|---|---|
| | | | ದಿನಾಂಕ | ವಿಭಾಗ | ಪ್ರಮಾಣ | |
| 01 | Amoxicillin + Clavulinic Acid Tablet 625 mg | 5000 | 12/12/2019 | ಓಪಿಡಿ | 200 | 3700+100 (ಓಪಿಡಿ ವಿಭಾಗಕ್ಕೆ ಸಂಬಂಧಿಸಿದ 100 ಮಾತ್ರೆಗಳನ್ನು ಒಳಗೊಂಡಿರು |
| | | | 13/12/2019 | ಓಪಿಡಿ | 200 | |
| | | | 16/12/2019 | ಓಪಿಡಿ | 200 | |
| | | | 18/12/2019 | ಓಪಿಡಿ | 200 | |
| | | | 19/12/2019 | ಓಪಿಡಿ | 500 | |

| | | | | | | |
|---|---|---|---|---|---|---|
| | | | | | | ತ್ತದೆ. |
| ಡಿಸೆಂಬರ್ ತಿಂಗಳಿನಲ್ಲಿ ಒಟ್ಟು ವಿತರಣೆಯಾದ ಪ್ರಮಾಣ: | | | | | 1300 | |

| | | |
|---|---|---|
| 3(VIII) | ಆಸ್ಪತ್ರೆಗೆ ಪೂರೈಕೆಯಾದ ಔಷಧಗಳ ಒಟ್ಟ ಮೊತ್ತದ ಕುರಿತು: | ➢ ಅಕ್ಟೋಬರ್, ನವಂಬರ್ ಹಾಗೂ ಡಿಸೆಂಬರ್ 2019 ತಿಂಗಳಿನಲ್ಲಿ ಈ ಆಸ್ಪತ್ರೆಗೆ ರೂ 891660.91 ಗಳ ಮೌಲ್ಯದ ಔಷಧಗಳು ಸರಬರಾಜು ಆಗಿರುತ್ತವೆ. ಔಷಧಗಳು ಸರಬರಾಜಾಗುವ ಇನ್ವಯಿಸ್‌ನಲ್ಲಿ ಸರಬರಾಜಾಗಿರುವ ಔಷಧಿಗಳ ಮೊತ್ತ ಹಾಗೂ ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ ಆಸ್ಪತ್ರೆಗೆ ಪೂರೈಕೆಯಾಗಿರುವ ಒಟ್ಟು ಮೊತ್ತವನ್ನು ಪ್ರತ್ಯೇಕವಾಗಿ ನಮೂದಿಸಲಾಗಿದ್ದು, ಪರಿಶೀಲನೆಯ ವೇಳೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸರಬರಾಜಾದ ಔಷಧಗಳ ಒಟ್ಟು ಮೊತ್ತವನ್ನು ಪರಿಗಣಿಸಲಾಗಿದೆ (ರೂ. 76.00 ಲಕ್ಷ) ವಾಸ್ತವವಾಗಿ ಆ ಅವಧಿಯಲ್ಲಿ ಈ ಆಸ್ಪತ್ರೆಗೆ ಸರಬರಾಜಾಗಿರುವ ಮೊತ್ತ ರೂ. 891660.91 ಗಳು ಆಗಿರುತ್ತವೆ. ಸದರಿ ಔಷಧಗಳು ಸರಬರಾಜಾಗಿರುವ ಇನ್ವಯಿಸ್‌ಗಳ ಪ್ರತಿಗಳೊಂದಿಗೆ ಸಂಪೂರ್ಣ ಮಾಹಿತಿಯನ್ನು ಸಲ್ಲಿಸಲಾಗಿದೆ. |

ಮುಂದುವರೆದು, ನನ್ನ ಮೂಲ ಕರ್ತವ್ಯದ ಸ್ಥಳ ಸಮುದಾಯ ಆರೋಗ್ಯ ಕೇಂದ್ರ ಲಕ್ಷ್ಮೇಶ್ವರ, ತಾಲ್ಲೂಕು ಮಟ್ಟದ 50 ಹಾಸಿಗೆಯ ಆಸ್ಪತ್ರೆಯಾಗಿದ್ದು ಕೇವಲ 2 ಫಾರ್ಮಾಸಿಸ್ಟ್ ಹುದ್ದೆಗಳು ಮಂಜೂರಾಗಿರುತ್ತದೆ. ಪ್ರತಿನಿತ್ಯ ಸುಮಾರು 300 ರಿಂದ 400 ಹೊರ ರೋಗಿಗಳು ಹಾಗೂ 25 ರಿಂದ 30 ಒಳರೋಗಿಗಳಿಗೆ ಆಸ್ಪತ್ರೆಯಲ್ಲಿನ ವಿವಿಧ ವಿಭಾಗದ ತಜ್ಞ ವೈದ್ಯಾಧಿಕಾರಿಗಳ ಸೂಚನೆಯಂತೆ ಸರಿಯಾದ ಔಷಧ, ಸರಿಯಾದ ಪ್ರಮಾಣ, ಸರಿಯಾದ ಸಮಯಕ್ಕೆ ಪ್ರತಿಯೊಬ್ಬ ರೋಗಿಗೆ ವಿತರಿಸಬೇಕಾಗಿರುತ್ತದೆ. ಇದರೊಂದಿಗೆ ಉಗ್ರಾಣದಲ್ಲಿನ ಔಷಧ ರಾಸಾಯನಿಕಗಳಿಗೆ ಸಂಬಂಧಿಸಿದ ಎಲ್ಲಾ ದಾಸ್ತಾನು ಪುಸ್ತಕಗಳನ್ನು ನಿಯಮಿತವಾಗಿ ನಿರ್ವಹಿಸುವುದು ಹಾಗೂ ಔಷಧಗಳಿಗೆ ಸಂಬಂಧಿಸಿದ ತಂತ್ರಾಂಶವನ್ನು ಅಪ್‌ಡೇಟ್ ಹಾಗೂ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸದರಿ ಕಾರ್ಯಕ್ರಮದ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆಂದು ತಿಳಿಸಿರುತ್ತಾರೆ.

ಮುಂದುವರೆದು, ಇದೇ ಶಿರಹಟ್ಟಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಆಸ್ಪತ್ರೆ ಶಿರಹಟ್ಟಿಯಲ್ಲಿ ಒಂದು ಹಿರಿಯ ಫಾರ್ಮಾಸಿಸ್ಟ ಹಾಗೂ ಎರಡು ಫಾರ್ಮಾಸಿಸ್ಟ ಹುದ್ದೆಗಳು ಮಂಜೂರಾಗಿದ್ದರೂ ಸಹ ಕೇವಲ ಒಬ್ಬ ಹಿರಿಯ ಫಾರ್ಮಾಸಿಸ್ಟ ಕಾರ್ಯನಿರ್ವಹಿಸುತ್ತಿದ್ದು ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಬರುವ ಜನ ಸಾಂದ್ರತೆ ಹಾಗೂ ಹೊರ ರೋಗಿ, ಒಳರೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಕೇವಲ ಒಬ್ಬ ಫಾರ್ಮಾಸಿಸ್ಟ್‌ನಿಂದ ರೋಗಿಗಳಿಗೆ ಪ್ರತಿನಿತ್ಯ ಔಷಧ ವಿತರಣೆಯು ಸಹ ಕಷ್ಟಸಾಧ್ಯವಾಗಿದ್ದರಿಂದ ಮಾನ್ಯ ತಾಲ್ಲೂಕು ವೈದ್ಯಾಧಿಕಾರಿಗಳ ಆದೇಶದ ಮೇರೆಗೆ ನನ್ನನ್ನು ಸಾರ್ವಜನಿಕ ಆಸ್ಪತ್ರೆ ಶಿರಹಟ್ಟಿ ಇಲ್ಲಿಗೆ ನಿಯೋಜಿಸಲಾಗಿತ್ತು. ನನ್ನ ಮೂಲ ಕರ್ತವ್ಯದ ಆಸ್ಪತ್ರೆಯಲ್ಲಿ ಕೆಲಸದ ಒತ್ತಡದ ನಡುವೆಯು ಸಹ ವಾರದಲ್ಲಿ ಎರಡು ದಿನ ಸಾರ್ವಜನಿಕ ಆಸ್ಪತ್ರೆ ಶಿರಹಟ್ಟಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆಂದು ತಿಳಿಸಿರುತ್ತಾರೆ.

ಮುಂದುವರೆದು, ದಿನಾಂಕ 15/10/2019 ರಂದು ನಿಯೋಜನೆ ಮೇರೆಗೆ ಕರ್ತವ್ಯಕ್ಕೆ ಹಾಜರಾದಾಗಿನಿಂದಲೂ ನನ್ನ ಅನುಪಸ್ಥಿತಿಯಲ್ಲಿನ ಔಷಧಕ್ಕೆ ಸಂಬಂಧಿಸಿದ ಎಲ್ಲಾ ವಹಿವಾಟನ್ನು ಆಸ್ಪತ್ರೆಯ ವಿವಿಧ ವಿಭಾಗಗಳಿಂದ ಪಡೆದು ದಾಸ್ತಾನು ಪುಸ್ತಕಗಳಲ್ಲಿ ನಮೂದಿಸಲಾಗುತ್ತಿದೆ. ತಮ್ಮ ಪರಿವೀಕ್ಷಣಾ ಸಮಯದಲ್ಲಿ ಕಂಡು ಬಂದ ನ್ಯೂನ್ಯತೆಗಳು ಕೆಲಸದ ಒತ್ತಡದಲ್ಲಿ ಹಾಗೂ ಸಮಯದ ಅಭಾವದಲ್ಲಿ ಆಗಿರುವ ನ್ಯೂನ್ಯತೆಗಳೇ ವಿನಃ ನನ್ನಿಂದ ಯಾವುದೇ ಕರ್ತವ್ಯದಲ್ಲಿ ಲೋಪವಾಗಲಿ ಅಥವಾ ದುರುಪಯೋಗವಾಗಲಿ ವೆಸಗಿರುವುದಿಲ್ಲ. ಗೌರವಾನ್ವಿತರ ಪರಿಶೀಲನೆಯ ಸಮಯದಲ್ಲಿ ಸೂಚಿಸಿರುವ ಕ್ರಮಗಳನ್ನು ಕೈಗೊಳ್ಳಲಾಗಿದ್ದು ಹಾಗೂ ತಾವುಗಳು ನೋಟೀಸ್‌ನಲ್ಲಿ ತಿಳಿಸಿರುವ ಲೋಪದೋಷಗಳನ್ನು ಈಗಾಗಲೇ ಸರಿಪಡಿಸಲಾಗಿದ್ದು ಇನ್ನು ಮುಂದೆ ಸದರಿ ನ್ಯೂನ್ಯತೆಗಳು ಮರುಕಳಿಸದಂತೆ ಎಚ್ಚರವಹಿಸಲಾಗುವುದು ಎಂದು ಹೇಳಿರುತ್ತಾರೆ.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಕಂಡು ಬರುವು ಅಂಶಗಳೆಂದರೆ,

1. ಔಷಧಗಳ ದಾಸ್ತಾನು ಪುಸ್ತಕ, ತಾಲ್ಲೂಕು ಆಸ್ಪತ್ರೆ, ಶಿರಹಟ್ಟಿ ಅನ್ನು ಪರಿಶೀಲಿಸಿದಾಗ, ಪ್ರಾರಂಭದ ದಿನಾಂಕ 22/10/2019 ಎಂದು ದೃಢೀಕರಣ ಪತ್ರದಲ್ಲಿ ನಮೂದಿಸಿದೆ. ಔಷಧಗಳ ದಾಸ್ತಾನು ಪುಸ್ತಕದಲ್ಲಿ ಔಷಧಿಗಳನ್ನು ಕೊಟ್ಟ ದಿನಾಂಕ, ಪ್ರಮಾಣ, ಶಿಲ್ಕು, ಸಹಿ, ಸ್ವೀಕರಿಸಿದ ದಿನಾಂಕ, ಕೊಟ್ಟ ದಿನಾಂಕ, ಔಷಧಿ ಪಡೆದುಕೊಂಡವರ ಸಹಿ ಇರುವುದಿಲ್ಲ. ದಾಸ್ತಾನು ಪುಸ್ತಕದ ಪುಟ ಸಂಖ್ಯೆಗಳು ಕ್ರಮ ಬದ್ಧವಾಗಿ ಇರುವುದಿಲ್ಲ. ಪುಟ ಸಂಖ್ಯೆಗಳು ಪ್ರಿಂಟೆಡ್‌ನಲ್ಲಿ ಇರುವುದಿಲ್ಲ.
2. ಶಿರಹಟ್ಟಿ ಆಸ್ಪತ್ರೆಗೆ ಔಷಧಿಗಳನ್ನು ಸರಬರಾಜು ಮಾಡಿದ ವೇರ್ ಹೌಸ್ ಔಟ್‌ವರ್ಡ್ ಇಡೆಂಟ್ ಅನ್ನು ಪರಿಶೀಲಿಸಿದಾಗ ದಿನಾಂಕ 23/10/2019 ರಂದು ರೂ. 2,38,437.52 ಔಷಧಿಗಳನ್ನು

ಕಳುಹಿಸಿಕೊಟ್ಟಿರುತ್ತಾರೆ. ದಿನಾಂಕ 13/11/2019 ರಲ್ಲಿ 3,86,995.35 ಔಷಧಿಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ದಿನಾಂಕ 09/12/2019 ರಲ್ಲಿ ರೂ. 2,60,705.64 ಔಷಧಿಗಳನ್ನು ಕಳುಹಿಸಿಕೊಟ್ಟಿರುತ್ತಾರೆ.

3. ಔಷಧಗಳ ದಾಸ್ತಾನು ಪುಸ್ತಕ ಪರಿಶೀಲಿಸಿದಾಗ, ದಾಸ್ತಾನು ಪಡೆದುಕೊಂಡವರ ಸಹಿ, ಸ್ವೀಕರಿಸಿದ ದಿನಾಂಕ, ಔಷಧಿಗಳನ್ನು ಕೊಟ್ಟ ದಿನಾಂಕ, ಪಡೆದುಕೊಂಡವರ ಸಹಿ ಇರುವುದಿಲ್ಲ. ಔಷಧಗಳ ದಾಸ್ತಾನು ಪುಸ್ತಕದಲ್ಲಿ ಪುಟ ಸಂಖ್ಯೆಗಳನ್ನು ನಮೂದಿಸಿರುವುದಿಲ್ಲ ಮತ್ತು ಪ್ರಿಂಟೆಡ್‌ನಲ್ಲಿ ಇರುವುದಿಲ್ಲ. ಪುಟ ಸಂಖ್ಯೆಗಳು ಸಹ ಕ್ರಮಬದ್ಧವಾಗಿ ಇರುವುದಿಲ್ಲ.

4. ಓಪಿಡಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೈದ್ಯಾಧಿಕಾರಿಗಳ ವಿವರಗಳು ಮತ್ತು ಔಷಧಿಗಳನ್ನು ಓಪಿಡಿ ವಿಭಾಗದವರು ಪಡೆದುಕೊಂಡ ಬಗ್ಗೆ ದಾಖಲೆಗಳಲ್ಲಿ ವೈದ್ಯರ ಸಹಿ ಇರುವುದಿಲ್ಲ. ಅಮಾಕ್ಸಿಲಿನ್ 125 ಎಮ್‌ಜಿ ಔಷದಿ ಓಪಿಡಿ ವಿಭಾಗಕ್ಕೆ ದಿನಾಂಕ 25/10/2019 ರಂದು 2500 ವಿತರಿಸಿದೆ ಎಂದು ನಮೂದು ಇದ್ದು ಬ್ಯಾಲೆನ್ಸ್ ಶಿಲ್ಕು 500 ಎಂದು ತಿದ್ದಿ ಬರೆದಿದೆ. ಓಪಿಡಿ ವಿಭಾಗದ ಕರ್ತವ್ಯ ನಿರತರ ವೈದ್ಯರ ವಿವರಗಳು ಮತ್ತು ಸಹಿ ಇರುವುದಿಲ್ಲ. ಓಪಿಡಿ ವಿಭಾಗಕ್ಕೆ ಬಂದಂತಹ ರೋಗಿಗಳ ವಿವರ ಮತ್ತು ರೋಗಿಗಳಿಗೆ ವಿತರಿಸಿದ ಮಾತ್ರೆಗಳ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ. ದಾಸ್ತಾನು ರಿಜಿಸ್ಟರ್‌ಗಳಲ್ಲಿ ಆಯಾ ದಿನಾಂಕಗಳಲ್ಲಿ ಕರ್ತವ್ಯ ನಿರ್ವಹಿಸಿದ ಫಾರ್ಮಾಸಿಸ್ಟ ವಿವರಗಳು ಮತ್ತು ಸಹಿ ಇರುವುದಿಲ್ಲ. Issuance ರಿಜಿಸ್ಟರ್ ಇಲ್ಲದೇ ಇರುವುದರಿಂದ ದಾಸ್ತಾನು ಕೊಠಡಿಯಿಂದ ಯಾವ ಯಾವ ಔಷಧಿಗಳು ಓಪಿಡಿ ವಿಭಾಗಕ್ಕೆ ಹೋಗಿದೆ ಎಂಬ ಬಗ್ಗೆ ವಿವರಗಳು ಲಭ್ಯವಿರುವುದಿಲ್ಲ. ಸ್ಟೋರ್ಸ್‌ನಿಂದ ಫಾರ್ಮಾಸಿಸ್ಟ ರವರು ಪಡೆದುಕೊಂಡ ಔಷಧಗಳ ವಹಿ ಲಭ್ಯವಿರುವುದಿಲ್ಲ.

5. 1ನೇ ಎದುರುದಾರರು ಜಿಲ್ಲಾ ಆರೋಗ್ಯಾಧಿಕಾರಿ ಆಗಿದ್ದು ಸಾರ್ವಜನಿಕ ಆಸ್ಪತ್ರೆ, ಶಿರಹಟ್ಟಿಯ ನಿಯತಕಾಲಿಕ ತಪಾಸಣೆಯನ್ನು ಕೈಗೊಂಡಿರುವುದಿಲ್ಲ ಎಂದು ಕಂಡುಬರುತ್ತದೆ. 2ನೇ ಎದುರುದಾರರು ಆಡಳಿತಾಧಿಕಾರಿ ಆಗಿದ್ದು ನಿಯಮಗಳ ಪ್ರಕಾರ ವಹಿಗಳನ್ನು ನಿರ್ವಹಿಸಿರುವುದಿಲ್ಲ. 3 ಮತ್ತು 4ನೇ ಎದುರುದಾರರು ಫಾರ್ಮಾಸಿಸ್ಟ ಆಗಿದ್ದು ವಹಿಗಳಲ್ಲಿ ಔಷಧಿಗಳ ವಿವರಗಳನ್ನು ರೋಗಿಗಳಿಗೆ ವಿತರಿಸಿದ ಬಗ್ಗೆ ಸಂಬಂಧಪಟ್ಟ ವಹಿಗಳಲ್ಲಿ ಷರಾಗಳನ್ನು ಬರೆದಿರುವುದಿಲ್ಲ. ಕೆಲಸದ ಒತ್ತಡದಲ್ಲಿ ಮತ್ತು ಸಮಯದ ಅಭಾವದಿಂದ ನ್ಯೂನ್ಯತೆಗಳು ಆಗಿರುತ್ತದೆ ಎಂದು ತಕರಾರಿನಲ್ಲಿ ಹೇಳಿದ್ದು ಒಪ್ಪಲು ಆಗುವುದಿಲ್ಲ.

5. ಆದುದರಿಂದ, 1 ರಿಂದ 4ನೇ ಎದುರುದಾರರುಗಳು ನೀಡಿರುವ ಉತ್ತರಗಳನ್ನು ಪರಿಶೀಲಿಸಿದಾಗ, ಅವರುಗಳ ವಿರುದ್ಧದ ಪ್ರಕರಣವನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣಗಳನ್ನು ತೋರಿಸಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

6. ದಾಖಲಾತಿಗಳನ್ನು ಪರಿಶೀಲಿಸಿದಾಗ 1 ರಿಂದ 4ನೇ ಎದುರುದಾರರುಗಳು ಸರ್ಕಾರಿ ನೌಕರರುಗಳಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

7. 1 ರಿಂದ 4ನೇ ಎದುರುದಾರರುಗಳು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಎಸಗಿರುವುದರಿಂದ ಸದರಿಯವರುಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದ ಅಡಿ, ಈಗ ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಆದ್ದರಿಂದ 1 ರಿಂದ 4ನೇ ಎದುರುದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. **3ನೇ ಎದುರುದಾರರಾದ ಶ್ರೀ.ಮೋಹನ್ ಛಬ್ಬಿ ರವರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್ ನಿಯಮ 214(2)(ಬಿ) ನಿಬಂಧನೆಯನ್ನು ಅನ್ವಯಿಸಿ ಸರ್ಕಾರದ ಆದೇಶವನ್ನು ಶಿಸ್ತು ಪ್ರಾಧಿಕಾರಕ್ಕೆ ಕಳುಹಿಸುವಂತೆ ಕೋರಿದೆ.**

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

8/4/22

**(ನ್ಯಾಯಾಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ.**